ದೂರವಾಣಿ:22371693

# ಕರ್ನಾಟಕ ಸರ್ಕಾರ

(ವಿದ್ಯುತ್ ಪರಿವೀಕ್ಷಣಾಲಯ)

ಸಂ: ಮುವಿಪ/ತೆರಿಗೆ/ಎ2/ 229-273 /2019-2020

ಲಗತ್ತು: Flow Chart

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ
ನಿರ್ಮಾಣ ಭವನ, 2ನೇ ಮಹಡಿ,
ರಾಜಾಜಿನಗರ 1ನೇ ಬ್ಲಾಕ್
ಡಾ. ರಾಜಕುಮಾರ್ ರಸ್ತೆ
ಬೆಂಗಳೂರು-560010.
ದಿನಾಂಕ: 24/04/19

## ಸುತ್ತೋಲೆ

ವಿಷಯ: ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟ ಮೇಲಿನ ತೆರಿಗೆ) ಕಾಯ್ದೆ 1959, ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟ ಮೇಲಿನ ತೆರಿಗೆ) ನಿಯಮ 2014 ರನ್ವಯ ಲೈಸನ್ಸ್ ದಾರರು / ನಾನ್ ಲೈಸನ್ಸ್ ದಾರರ ಸಲ್ಲಿಸಬೇಕಾದ ನಮೂನೆ, ವಿದ್ಯುತ್ ಉತ್ಪಾದನೆ, ಸ್ವಂತ ಬಳಕೆ, ಆಕ್ಸಲರಿ ಬಳಕೆ, ವಿದ್ಯುತ್ ಯುನಿಟ್ಟುಗಳ ಸರಬರಾಜು /ಮಾರಾಟ, ವಿದ್ಯುತ್ ತೆರಿಗೆ ಪಾವತಿ ವಿವರ ಇತ್ಯಾದಿಯ ಬಗ್ಗೆ ಸಲ್ಲಿಸಬೇಕಾದ ಮಾಹಿತಿಯನ್ನು ಆನ್ ಲೈನ್ ನಲ್ಲಿ - ಸೇವಾ ಸಿಂಧು ಪೋರ್ಟಲ್ ಮೂಲಕ ಸಲ್ಲಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 68 ಶಾಸನ 2012, ಬೆಂಗಳೂರು , ದಿ: 11.3.2013.

2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 144 ಇಬಿಎಸ್ 2013, ಬೆಂಗಳೂರು ದಿ: 19.8.2014 – ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕ 11.9.2014.

3. ಸರ್ಕಾರದ ಅಧಿಸೂಚನೆ ಸಂಖ್ಯೆ – I & II ಇಎನ್ 27 ಇಬಿಎಸ್ 2013, ಬೆಂಗಳೂರು ದಿ: 24.11.2014 – ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕ 19.3.2015.

4. ಸರ್ಕಾರದ ಅಧಿಸೂಚನೆ ಸಂಖ್ಯೆ ಇಎನ್ 106 ಇಬಿಎಸ್ 2018 ಬೆಂಗಳೂರು ದಿನಾಂಕ 19-7-2018 ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕ 21.07.2018.

5. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 17 ಶಾಸನ 2018, ಬೆಂಗಳೂರು , ದಿ: 19.7.2018.

6 .email.msg.from sevasindhu dt.12.04.2019.

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಿಳಿಸುವುದೇನೆಂದರೆ ಉಲ್ಲೇಖ (1) ರ ಅಧಿಸೂಚನೆಯಲ್ಲಿ ವಿದ್ಯುತ್ ಬಳಕೆದಾರ, ಸ್ವ ವಿದ್ಯುತ್ ಬಳಕೆ, ಆಕ್ಸಲರಿ ಬಳಕೆ, ಲೈಸನ್ಸ್ ದಾರರು, ನಾನ್ ಲೈಸನ್ಸ್ ದಾರರು,ವಿದ್ಯುತ್ ತೆರಿಗೆ ವಿಧಿಸುವ ಬಗ್ಗೆ, ವಿದ್ಯುತ್ ತೆರಿಗೆ ವಸೂಲಾತಿ ಬಗ್ಗೆ, ವಿಳಂಭ ಪಾವತಿಗೆ ಬಡ್ಡಿಯನ್ನು ವಿಧಿಸುವ ಬಗ್ಗೆ, ವಿದ್ಯುತ್ ತೆರಿಗೆ ವಿಧಿಸಿರುವುದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವ ಬಗ್ಗೆ , ಸಂಪೂರ್ಣ ವಿವರಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟ ಮೇಲಿನ ತೆರಿಗೆ) ಕಾಯ್ದೆ 1959, ರಲ್ಲಿ ತಿಳಿಸಿ ದಿನಾಂಕ 11.3.2013 ರಿಂದ ಜಾರಿಗೊಳಿಸಲಾಗಿರುತ್ತದೆ.

ಸದರಿ ಕಾಯ್ದೆಯ ಸೆಕ್ಷನ್ 10 ರಡಿಯಲ್ಲಿ ಉಲ್ಲೇಖ (2) ರನ್ವಯ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟ ಮೇಲಿನ ತೆರಿಗೆ) ನಿಯಮ 2014 ಅನ್ನು ಜಾರಿಗೊಳಿಸಲಾಗಿರುತ್ತದೆ. ಅದರಂತೆ ಲೈಸನ್ಸ್ ದಾರರು / ನಾನ್ ಲೈಸನ್ಸ್ ದಾರರು ನಿರ್ವಹಿಸಬೇಕಾದ ಲೆಕ್ಕ ಪತ್ರಗಳ ನಮೂನೆಗಳು, ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಸಂಬಂಧಪಟ್ಟ ವಲಯ/ವಿಭಾಗೀಯ/ಉಪ ವಿಭಾಗೀಯ ಕಚೇರಿಗಳಿಗೆ ನಿಯಮಾನುಸಾರ ಸಲ್ಲಿಸಬೇಕಾದ ನಮೂನೆಗಳು , ಉಲ್ಲೇಖ (4) ಮತ್ತು (5) ರಡಿಯಲ್ಲಿ ತಿಳಿಸಿರುವಂತೆ ಸರ್ಕಾರಕ್ಕೆ ಪಾವತಿಸಬೇಕಾದ ವಿದ್ಯುತ್ ತೆರಿಗೆಯ ಪ್ರಸ್ತುತ ದರ ವಿವರಗಳನ್ನು ತಿಳಿಸಲಾಗಿರುತ್ತದೆ.

ಈ ಬಗ್ಗೆ ಮಾಹಿತಿಯನ್ನು ಲೈಸನ್ಸ್ ದಾರರು / ನಾನ್ ಲೈಸನ್ಸ್ ದಾರರ ಆಫ್ ಲೈನ್ ಮೂಲಕ ಭರ್ತಿ ಮಾಡಿದ ನಮೂನೆಗಳನ್ನು ಸಂಬಂಧಪಟ್ಟ ಕಚೇರಿಗಳಿಗೆ ಸಲ್ಲಿಸಲಾಗುತ್ತಿರುತ್ತದೆ.

ದಿನಾಂಕ 15-04-2019 ರಿಂದ ಜಾರಿಗೆ ಬಂದಂತೆ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟ ಮೇಲಿನ ತೆರಿಗೆ) ನಿಯಮ 2014 ರನ್ವಯ ಲೈಸನ್ಸ್ ದಾರರು / ನಾನ್ ಲೈಸನ್ಸ್ ದಾರರು ಸಲ್ಲಿಸಬೇಕಾದ ಮಾಹಿತಿಯನ್ನು ಆನ್ ಲೈನ್ "ಸೇವಾ ಸಿಂಧು" ವಿದ್ಯುನ್ಮಾನ ಜಾಲದ ಮೂಲಕ ಸಲ್ಲಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿರುತ್ತದೆ. ಆನ್ ಲೈನ್ ಪೋರ್ಟಲ್ ವಿವರ ಈ ಕೆಳಕಂಡಂತಿರುತ್ತದೆ.

ವೆಬ್ ಸೈಟ್ ವಿಳಾಸ: "https://sevasindhu.karnataka.gov.in

ಅದರಂತೆ ದಿನಾಂಕ 1-5-2019 ರಿಂದ (ಏಪ್ರಿಲ್ 2019 ರ ವಿದ್ಯುತ್ ತೆರಿಗೆ ರಿಟರ್ನ್ ಗಳನ್ನು ) ಜಾರಿಗೆ ಬಂದಂತೆ ಆನ್ ಲೈನ್ ಮೂಲಕ ಸಲ್ಲಿಸುವಂತೆ ಲೈಸನ್ಸ್ ದಾರರು / ***ನಾನ್ ಲೈಸನ್ಸ್ ದಾರರಿಗೆ*** ಮಾಹಿತಿ ನೀಡಿ, ಆನ್ ಲೈನ್ ಮೂಲಕ ಮಾಹಿತಿಯನ್ನು ಸ್ವೀಕರಿಸಿ, ಮೇಲಿನ ಕಾಯ್ದೆ ಮತ್ತು ನಿಯಮದಂತೆ , ಆನ್ ಲೈನ್ ತಂತ್ರಾಂಶದ ಮೂಲಕ ನಿಗಧಿಪಡಿಸಿರುವ ಕಾರ್ಯವಿಧಾನದಲ್ಲಿ ಕೆಲಸ ನಿರ್ವಹಿಸಿ, ಮಾಹಿತಿಯನ್ನು ಕೇಂದ್ರ ಕಚೇರಿಗೆ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಮುಂದುವರಿದು ಆಫ್ ಲೈನ್ ನಮೂನೆಗಳನ್ನು ಸಹ 31 ನೇ ಜುಲೈ 2019 ರ ವರೆವಿಗೆ ಆನ್ ಲೈನ್ ವ್ಯವಸ್ಥೆಯ ಜೊತೆಯಲ್ಲಿ ನಿರ್ವಹಿಸಿ, ತದನಂತರ ಪೂರ್ಣವಾಗಿ ಆನ್ ಲೈನ್ ಮೂಲಕ ಸ್ವೀಕರಿಸುವ ವ್ಯವಸ್ಥೆಯನ್ನು ಜಾರಿಗೊಳಿಸುವಂತೆಯೂ ಸಹ ಈ ಮೂಲಕ ತಿಳಿಸಲಾಗಿದೆ.

24/4/19

ಮುಖ್ಯ ವಿದ್ಯುತ್ ಪರಿವೀಕ್ಷಕರು.

ಪ್ರತಿಯನ್ನು: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ವಿಕಾಸೌಧ, ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಲಾಗಿದೆ.

ಪ್ರತಿಯನ್ನು: (ಸೂಕ್ತ ಕ್ರಮಕ್ಕಾಗಿ)

ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಸಂಸ್ಥೆ, ಬೆಂಗಳೂರು.
ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಸಂಸ್ಥೆ, ಮಂಗಳೂರು.
ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗ ವಿದ್ಯುತ್ ಸರಬರಾಜು ಸಂಸ್ಥೆ, ಗುಲ್ಬರ್ಗ
ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಸಂಸ್ಥೆ, ಹುಬ್ಬಳ್ಳಿ
ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.
ವ್ಯವಸ್ಥಾಪಕ ನಿರ್ದೇಶಕರು, ಮೆ.ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ ನಿಯಮಿತ, ಹುಕ್ಕೇರಿ

ಪ್ರತಿಯನ್ನು: (ಸೂಕ್ತ ಕ್ರಮಕ್ಕಾಗಿ ಹಾಗೂ ಸುತ್ತೋಲೆ ಪ್ರತಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಸೂಚನಾ ಫಲಕದಲ್ಲಿ ಅಳವಡಿಸಲು.)

ಎಲ್ಲಾ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು,
ಎಲ್ಲಾ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು,
ಎಲ್ಲಾ ವಿದ್ಯುತ್ ಪರಿವೀಕ್ಷಕರು,
ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರು

## KARNATAKA ELECTRICITY (TAXATION ON CONSUMPTION OR SALE )ACT 1959

### COLLECTION OF ELECTRICITY TAX FROM LICENSEES



KARNATAKA ELECTRICITY (TAXATION ON CONSUMPTION OR SALE )ACT 1959

COLLECTION OF ELECTRICITY TAX FROM NON LICENSEE

